**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 1004/2021**

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿತರುಃ**

1. ದೇವರಾಜ ಎಸ್.ಎನ್. ಬಿನ್ ನಾಗರಾಜು,
38 ವರ್ಷ ವಯಸ್ಸು,
2. ಹರೀಶ ಎಸ್.ಎನ್. ಬಿನ್ ನಾಗರಾಜ,
34 ವರ್ಷ ವಯಸ್ಸು,

ಆರೋಪಿ 1 ಮತ್ತು 2 ರವರ
ವಾಸಃ ಶ್ರವಣೇರಿ ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ.

**ದೋಷಾರೋಪಣೆ**

**ದೀಪು ಬಿ.ಸಿ.**, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕಃ 16.03.2021 ರಂದು ಬೆಳಗ್ಗೆ 7.15 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಶ್ರವಣೇರಿ ಗ್ರಾಮದಲ್ಲಿ ಸಾಕ್ಷಿ.1 ರವರು ಆರೋಪಿಗಳಾದ ನಿಮ್ಮನ್ನು ಏಕೆ ನಮ್ಮ ಜೋಳದ ಹೊಲವನ್ನು ಉಳುಮೆ ಮಾಡಿದ್ದೀರಾ ಎಂದು ಕೇಳಿದ್ದಕ್ಕೆ, ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ, ಸಾಕ್ಷಿ.1 ರವರನ್ನು ಕುರಿತು ಅವರು ಕುಪಿತರಾಗಿ ಶಾಂತಿಭಂಗವನ್ನುಂಟುಮಾಡಲಿ ಎಂಬ ಉದ್ದೇಶದಿಂದ, ಸಾಕ್ಷಿ.1 ರವರಿಗೆ ಸೂಳೆಮಗನೆ, ಬೋಳಿಮಗನೆ ನಿಮ್ಮ ಅಪ್ಪನ ಜಮೀನಲ್ಲ, ಇದು ನಮ್ಮ ಜಮೀನು,

ನೀನು ಯಾರು ಕೇಳುವುದಕ್ಕೆ ಎಂದು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಆರೋಪಿಗಳಾದ ನೀವು **ಭಾರತೀಯ ದಂಡ ಸಂಹಿತೆ ಕಲಂಃ 504 ಸಹವಾಚಕ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**2)** ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, 2 ನೇ ಆರೋಪಿಯಾದ ನೀವು ನಿಮ್ಮ ಸ್ವ ಇಚ್ಚೆಯಿಂದ ಸಾಕ್ಷಿ.1 ರವರಿಗೆ ಕೈಗಳಿಂದ ಮೈಕೈಗೆ ಗುದ್ದಿ ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿಗಳಾದ ನೀವು **ಭಾರತೀಯ ದಂಡ ಸಂಹಿತೆ ಕಲಂಃ 323 ಸಹವಾಚಕ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**3)** ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, 1 ನೇ ಆರೋಪಿಯಾದ ನೀವು ನಿಮ್ಮ ಸ್ವ ಇಚ್ಚೆಯಿಂದ ಕೈಯ್ಯಲ್ಲಿದ್ದ ಮಾರಕಾಯುಧವಾದ ಬಿದಿರು ದೊಣ್ಣೆಯಿಂದ ಸಾಕ್ಷಿ.1 ರವರ ತಲೆಯ ಹಿಂಭಾಗ ಮತ್ತು ಬೆನ್ನಿಗೆ ಹೊಡೆದು, 2 ನೇ ಆರೋಪಿಯಾದ ನೀವು ಅಲ್ಲೇ ಬಿದ್ದಿದ್ದ ಇನ್ನೊಂದು ಬಿದಿರು ದೊಣ್ಣೆಯಿಂದ ಸಾಕ್ಷಿ.1 ರವರ ಎರಡೂ ಕಾಲಿಗೆ ಮತ್ತು ಎಡಭುಜಕ್ಕೆ, ಬೆನ್ನಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿ, ಆ ಮೂಲಕ ಆರೋಪಿಗಳಾದ ನೀವು **ಭಾರತೀಯ ದಂಡ ಸಂಹಿತೆ ಕಲಂಃ 324 ಸಹವಾಚಕ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

**4)** ಅದೇ ದಿನ, ಅದೇ ಸ್ಥಳ, ಅದೇ ಸಮಯದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶವನ್ನು ಹೊಂದಿ, ಸಾಕ್ಷಿ.1 ರವರಿಗೆ ಜಮೀನು ವಿಚಾರಕ್ಕೆ ಬಂದರೆ ಕೊಲೆ ಮಾಡದೆ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡಿ, ಆ ಮೂಲಕ ಆರೋಪಿಗಳಾದ ನೀವು **ಭಾರತೀಯ**

**ದಂಡ ಸಂಹಿತೆ ಕಲಂಃ 506 ಸಹವಾಚಕ 34** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಬರುವಂತೆ ಎಸಗಿರುತ್ತೀರಿ.

ದಿನಾಂಕಃ **20.11.2024**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆಃ 1004/2021**

**ಪಿರ್ಯಾದಿದಾರರುಃ** ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

**ಆರೋಪಿತರುಃ** 1. ದೇವರಾಜ ಎಸ್.ಎನ್. ಬಿನ್ ನಾಗರಾಜು,
38 ವರ್ಷ ವಯಸ್ಸು,
ವಾಸಃ ಶ್ರವಣೇರಿ ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ.

**ದೋಷಾರೋಪಣೆ**

**ಪ್ರಶ್ನೆಃ** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆ ನಿಮಗೆ ತಿಳಿಯಿತೆ?

ಉತ್ತರಃ ಅರ್ಥವಾಯಿತು

**ಪ್ರಶ್ನೆಃ** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಉತ್ತರಃ ವಿಚಾರಣೆಯಾಗಬೇಕು

(ಈ ದೋಷರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ/ಗಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿ/ಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **20.11.2024**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

<u>**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**</u>

<u>**ಸಿಸಿ ಸಂಖ್ಯೆಃ 1004/2021**</u>

<u>**ಪಿರ್ಯಾದಿದಾರರುಃ**</u> ರಾಜ್ಯ ಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣೆ

**ವಿರುದ್ದ**

<u>**ಆರೋಪಿತರುಃ**</u> 2. ಹರೀಶ ಎಸ್.ಎನ್. ಬಿನ್ ನಾಗರಾಜ,
34 ವರ್ಷ ವಯಸ್ಸು,
ವಾಸಃ ಶ್ರವಣೇರಿ ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು, ಹಾಸನ.

<u>**ದೋಷಾರೋಪಣೆ**</u>

**ಪ್ರಶ್ನೆಃ** 1. ಈಗ ನಿಮಗೆ ಓದಿ ಹೇಳಲಾದ ನಿಮ್ಮ ಮೇಲಿನ ದೋಷಾರೋಪಣೆ ನಿಮಗೆ ತಿಳಿಯಿತೆ?

ಉತ್ತರಃ ಅರ್ಥವಾಯಿತು

**ಪ್ರಶ್ನೆಃ** 2. ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆ ನಡೆಯಲೆಂದು ಬಯಸುತ್ತೀರಾ?

ಉತ್ತರಃ ವಿಚಾರಣೆಯಾಗಬೇಕು

(ಈ ದೋಷರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿ/ಗಳಿಗೆ ತಿಳಿದಿರುವ ಭಾಷೆಯಲ್ಲಿ ಓದಿ ಹೇಳಿ ಕೇಳಲಾಗಿ ಆರೋಪಿ/ಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

ದಿನಾಂಕಃ **20.11.2024**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.